ಮಾಡುತ್ತಿದ್ದಾರೆ. ಇದರಿಂದ ರಾಜ್ಯದ ಬೊಕ್ಕಸಕ್ಕೆ ಲಾಸ್ ಆಗುತ್ತಿದೆ. ಇದನು ತಡೆಗಟ್ಟುವ ದೃಷ್ಟಿಯಿಂದ ಈ ಒಂದು ಪಡೆಯನ್ನು 41ಕ್ಕೆ ಸೀಮಿತ ಮಾಡಿದ್ದೇವೆ, ಇದು ಮುಂದುವರೆಯುತ್ತದೆ. ಈಗಾಗಲೇ ತಮಗೆ ಗೊತ್ತಿರುವ ಮಾಹಿತಿಯ ಪ್ರಕಾರ, ಈ ದಾಳಿಗಳಿಂದ ಅಬಕಾರಿ ಆದಾಯ 2008–09ರಲ್ಲಿ ರೂ. 1263 ಕೋಟಿ ಜಾಸ್ತಿಯಾಗಿದೆ, 2010–11ರಲ್ಲಿ ರೂ. 1344 ಕೋಟಿ ಜಾಸ್ತಿಯಾಗಿದೆ ಈ ದೃಷ್ಟಿಯಿಂದ ಇದನ್ನು ಮುಂದುವರೆಸುತ್ತೇವೆ. ಎಲ್ಲಿಯವರೆಗೆ ಇದರ ಅವಶ್ಯಕತೆ ಇದೆ, ಅಲ್ಲಿಯವರೆಗೆ ಮುಂದುವರೆಸುತ್ತೇವೆ. ಈಗಾಗಲೇ 44 ಬೊಲೆರೋ ಜೀಪುಗಳನ್ನು ಇದಕ್ಕೋಸ್ಕರ ಮೀಸಲಿಟ್ಟಿದ್ದೇವೆ. 4 ಟಾಟಾ ಸುಮೋ, 43 ದ್ವಿಚಕ್ರ ವಾಹನಗಳು ಈ ತರಹದ ವ್ಯವಸ್ಥೆಗಳನ್ನು ಮಾಡುವುದರ ಮುಖಾಂತರ ಕಳ್ಳಭಟ್ಟಿ ಸಾರಾಯಿ ತೆಗೆಯುವುದರಿಂದ ಜನಗಳಿಗೆ ಪ್ರಾಣ ಹಾನಿ ಆಗಿ ನಷ್ಟವಾಗುತ್ತಿದೆ ಅದನ್ನು ತಡೆಗಟ್ಟುವುದು ಇದರ ಮುಖ್ಯ ಉದ್ದೇಶ. ಆದ್ದರಿಂದ ಇದನ್ನು ಎಲ್ಲಿಯವರೆಗೆ ಅವಶ್ಯಕತೆ ಇದೆ, ಎಲ್ಲಿಯವರೆಗೆ ಈ ದಂಧೆ ನಿಲ್ಲುವುದಿಲ್ಲ, ಅಲ್ಲಿಯವರೆಗೆ ಈ ವ್ಯವಸ್ಥೆಯನ್ನು ಮುಂದುವರೆಸುತ್ತೇವೆ.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು:

ಶ್ರೀ ಎಸ್. ಸುರೇಶ್ ಕುಮಾರ್: (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ 08–12–2011ರ 3ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 93 ಪ್ರಶ್ನೆಗಳ ಪೈಕಿ 71 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಉಪಾಧ್ಯಕ್ಷರು: ಮಂಡಿಸಲಾಯಿತು (ಅನುಬಂಧ–1)

3. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಶ್ರೀ ಡಿ. ವಿ. ಸದಾನಂದಗೌಡ (ಮಾನ್ಯ ಮುಖ್ಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ 2010–11ನೇ ಸಾಲಿನ ಹಣಕಾಸು ಲೆಕ್ಕ ಪತ್ರಗಳು ಹಾಗೂ ಧನವಿನಿಯೋಗ ಲೆಕ್ಕಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು: ಮಂಡಿಸಲಾಯಿತು